ಶ್ರೀ ಎಂ.ಸಿ.ನಾಣಯ್ಯ (ಕಾನೂನು, ಸಂಸದೀಯ ಮತ್ತು ಶಾಸನ ರಚನೆ ಸಚಿವರು) :

1) ದಿನಾಂಕ : 1.2.1999ರ ಅಂತ್ಯಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆಗಳ (ಸಿವಿಲ್ ಮತ್ತು ಕ್ರಿಮಿನಲ್) ಒಟ್ಟು ವಿವರ ಈ ಕೆಳಕಂಡಂತಿವೆ.

ಸಿವಿಲ್	ಕ್ರಿಮಿನಲ್	ಒಟ್ಟು
84824	4594	89,418

ಬಾಕಿ ಇರುವ ಮೊಕದ್ದಮೆಗಳ ವರ್ಷವಾರು ವಿವರ

ವರ್ಷ		ಮೊಕದ್ದಮೆ ಸಂ :
1985	(ಹಿಂದಿನ)	30
1985		17
1986		24
1987		48
1988		607
1989		1133
1990		1197
1991		1131
1992		3601
1993		7193
1994		4406
1995		7208
1996		10028
1997		15238
1998		32112
1999		5445
	ಒಟ್ಟು	**89418**

2) ಕಳೆದ ಮೂರು ವರ್ಷಗಳಿಂದ ಬಾಕಿ ಇರುವ ಮೊಕದ್ದಮೆಗಳನ್ನು ಗಣನೀಯವಾಗಿ ಇತ್ಯರ್ಥಗೊಳಿಸಲಾಗಿದೆ.

ರಾಜ್ಯದಲ್ಲಿ ನೀಲಗಿರಿ ತೋಪುಗಳ ಮಾರಾಟ

579 (1008) ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ನೀಲಗಿರಿ ನೆಡುತೋಪುಗಳ ಮಾರಾಟದ ಬಗ್ಗೆ ಸರ್ಕಾರವು ಅನುಸರಿಸುತ್ತಿರುವ ನೀತಿ ನಿಯಮಗಳೇನು ?

ಆ) 1998-99ರಲ್ಲಿ ಇಂತಹ ಮಾರಾಟದಿಂದ ಸರ್ಕಾರಕ್ಕೆ ಬಂದಿರುವ ಒಟ್ಟು ಮೊಬಲಗು ಎಷ್ಟು ?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು)

ಅ) ಕರ್ನಾಟಕ ಅರಣ್ಯ ಇಲಾಖೆಯ ನಿಯಂತ್ರಣದಲ್ಲಿ ಇರುವ ಮತ್ತು ಕಟಾವಿಗೆ ಸಿದ್ಧವಾದ ನೀಲಗಿರಿ ನೆಡುತೋಪುಗಳಿಗೆ ಸಂಬಂಧಿಸಿದಂತೆ, ಲಭ್ಯವಿರುವ ಮರಗಳನ್ನು ಕಡಿದು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುತ್ತಿದೆ. ಕೆಲವೊಂದು ನೀಲಗಿರಿ ನೆಡುತೋಪುಗಳನ್ನು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾನಿಗಮಕ್ಕೆ ಕಟ್ಟಿಗೆ ಡಿಪೋ ನಡೆಸುವ ಸಲುವಾಗಿ ಕೊಡಲಾಗಿದೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದನಿಯಂತ್ರಣದಲ್ಲಿರುವ ನೀಲಗಿರಿ ನೆಡುತೋಪುಗಳನ್ನು ಮಾರುಕಟ್ಟೆಯ ದರದಲ್ಲಿ ಕರ್ನಾಟಕದಲ್ಲಿ ಸ್ಥಾಪಿತವಾದ ಕಾಗದ ಮತ್ತು ರೆಯಾನ್ ಉದ್ದಿಮೆಗಳಿಗೆ ಹಂಚಿಕೆ ಮಾಡಲಾಗುತ್ತದೆ.

ಅರಣ್ಯೇತರ ಪ್ರದೇಶಗಳಾದ ಗೋಮಾಳ, ಸಿಮತ್ತು ಡಿ ವರ್ಗದ ಜಮೀನು ಮತ್ತು ಇತರ ಜಮೀನುಗಳಲ್ಲಿ ಬೆಳೆಯಿಸಲಾದ ನೆಡುತೋಪುಗಳನ್ನು ಬಹಿರಂಗ ಹರಾಜಿನ ಮೂಲಕ ಮತ್ತು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಮೂಲಕ ಹರಾಜು ಮಾಡಲಾಗುತ್ತದೆ.

ಆ) 1998-99ರಲ್ಲಿ ಬಂದ ಆದಾಯದ ವಿವರಗಳು ಈ ಕೆಳಗಿನಂತಿದೆ.

ಲಕ್ಷ ರೂ.ಗಳಲ್ಲಿ

ಇಲಾಖಾ ನೆಡುತೋಪಿನ ಆದಾಯ	-	110.55 (ಜನವರಿ 1999ರ ಅಂತ್ಯದವರೆಗೆ)
ಕರ್ನಾಟಕ ಅರಣ್ಯಅಭಿವೃದ್ಧಿ ನಿಗಮದ ನೆಡುತೋಪು	-	397.11 (ಫೆಬ್ರವರಿ 1999ರಗಳಿಂದ ಆದಾಯ ಅಂತ್ಯದವರೆಗೆ)
ಜಿಲ್ಲಾ ಪಂಚಾಯತ್ ಸಾಮಾಜಿಕ ಅರಣ್ಯ ವಿಭಾಗ) ವ್ಯಾಪ್ತಿಯಲ್ಲಿ ಬರುವ ನೆಡು ತೋಪುಗಳಿಂದ ಆದಾಯ	-	37.749

ತುಮಕೂರು ಜಿಲ್ಲೆಯ ತಿಪಟೂರು ಕ್ಷೇತ್ರ ರಸ್ತೆಗಳ ರಿಪೇರಿ

582 (664) ಶ್ರೀ ಬಿ.ನಂಜಾಮರಿ (ತಿಪಟೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಲ್ಲಿರುವ ತಿಪಟೂರು ಕ್ಷೇತ್ರ (ತಾಲ್ಲೂಕಿನಲ್ಲಿ) ದಲ್ಲಿರುವ ಲೋಕೋಪಯೋಗಿ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?